OS 373/2018

PW-2

ದಿ. 18.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ.ಆರ್ ಸಿ ರವರಿಂದಃ-**

1. ಈ ದಾವೆಯನ್ನು ನಂಜಯ್ಯ ಎನ್ನುವವರು ದಿಲೀಪ್ ಕುಮಾರ್ ಎನ್ನುವವರ ವಿರುದ್ದ ಹೂಡಿರುತ್ತಾರೆ. ಈ ದಾವೆಯನ್ನು ವಾದಿಯು ಸರ್ವೆ ನಂ.211/3 1 ಎಕರೆ 14 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. ದಾವಾ ಸ್ವತ್ತಿನ ಪೂರ್ವಕ್ಕೆ ಶಿವಣ್ಣನವರ ಜಮೀನು, ಪಶ್ಚಿಮಕ್ಕೆ ಎನ್ ಹೆಚ್ ರಸ್ತೆ, ಉತ್ತರಕ್ಕೆ ನನಗೆ ಸೇರಿದ ಜಮೀನು ಮತ್ತು ದಕ್ಷಿಣಕ್ಕೆ ಸತೀಶ್ ಮತ್ತು ಚಂದ್ರುರವರ ಜಮೀನು ಬರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ಶಿವಣ್ಣನವರ ಜಮೀನು ಬರುವುದಿಲ್ಲ ಅಲ್ಲಿ ಪ್ರತಿವಾದಿಯ ತಂದೆಯ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ವಾದಿ ನನಗೆ 40-50 ವರ್ಷಗಳಿಂದ ಪರಿಚಯ. ನಾನು ಸಹ ಪ್ರತಿವಾದಿಯ ವಿರುದ್ದ ಒಂದು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಹಾಗಾಗಿ ಪ್ರತಿವಾದಿಯನ್ನು ಕಂಡರೆ ನನಗೆ ಆಗುವುದಿಲ್ಲ ಎಂದರೆ ಸಾಕ್ಷಿಯು ಅವರು ಒತ್ತುವರಿ ಮಾಡಿ ನಮಗೆ ತೊಂದರೆ ಕೊಟ್ಟಿರುತ್ತಾರೆ ಬೆಳೆ ಲಾಸ್ ಮಾಡಿದ್ದಾರೆ ಹಾಗಾಗಿ ಆಗುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ಒತ್ತುವರಿ ಮಾಡಿದ್ದಾರೆ ಎಂದು ಜಮೀನು ಬಿಡಿಸಿಕೊಳ್ಳಲು ನಾನು ಅವರ ವಿರುದ್ದ ಕೇಸು ಹಾಕಿರುತ್ತೇನೆ. ಪ್ರತಿವಾದಿಯೊಂದಿಗೆ ನನ್ನ ಸಂಬಂಧ ಸರಿಯಾಗಿ ಇಲ್ಲದೇ ಇರುವ ಕಾರಣ ವಾದಿಗೆ ಸಹಾಯವಾಗಲಿ ಎಂದು ಪ್ರತಿವಾದಿಯ ವಿರುದ್ದ ಸುಳ್ಳು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

PW-2

2. ವಾದಿ ದಾವಾ ಸ್ವತ್ತನ್ನು 40 ವರ್ಷಗಳ ಹಿಂದೆ ಖರೀದಿಸಿರುತ್ತಾರೆ. ಯಾವಾಗ ಖರೀದಿಸಿರುತ್ತಾರೆ ಎಂದು ಖಚಿತವಾಗಿ ದಿನಾಂಕ ತಿಂಗಳು ಮತ್ತು ವರ್ಷ ಹೇಳಲು ಬರುವುದಿಲ್ಲ. ಕ್ರಯ ತೆಗೆದುಕೊಳ್ಳವ ಸಮಯಕ್ಕೆ ನಾನು ಸಹ ಹಾಜರಿದ್ದೆ. ವಾದಿಯ ಕ್ರಯಪತ್ರಕ್ಕೆ ನಾನು ಸಹಿ ಮಾಡಿಲ್ಲ. ಕ್ರಯಪತ್ರಕ್ಕೆ ಸಾಕ್ಷಿದಾರರಾಗಿ ಯಾರು ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯ ಹೆಸರಿಗೆ ಆಗಿದೆ ಎಂದು ಹೇಳುವ ಕ್ರಯಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ವಾದಿಗೆ ಸಹಾಯವಾಗಲಿ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಹೇಳಿದ ಚಕ್ಕುಬಂದಿಯ ನಡುವೆ ವಾದಿಯು ಯಾವತ್ತು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವದ ಕಡೆಗೆ ಬರುವ ಪ್ರತಿವಾದಿಯ ತಂದೆಯ ಜಮೀನನ್ನು ಸೇರಿಸಿ ವಾದಿ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ರಸ್ತೆಯಾದ ನಂತರ ಪ್ರತಿವಾದಿಯ ತಂದೆಗೆ ಸೇರಿದ ಜಮೀನು ಬರುತ್ತದೆ ಎಂದರೆ ಸಾಕ್ಷಿಯು ಇರಬಹುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

3. ಪ್ರತಿವಾದಿ ತಮಗೆ ಸೇರಿದ ಜಮೀನಿನಲ್ಲಿ ಸುತ್ತಲೂ ಕಂಪೌಂಡ್ ಹಾಕಿಕೊಂಡು ಇದ್ದಾರೆ ಎಂದರೆ ಸರಿಯಲ್ಲ. ನಾನು ಈ ಮೇಲೆ ಹೇಳಿದ ಚಕ್ಕುಬಂದಿಯ ನಡುವೆ ವಾದಿಯು ಯಾವತ್ತು ಸ್ವಾಧೀನಾನುಭವದಲ್ಲಿ ಇಲ್ಲ ಮತ್ತು ಬೆಳೆ ಬೆಳೆಯುತ್ತಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಯಾವ ದಿನಾಂಕ ತಾರೀಖು ಮತ್ತು ವರ್ಷದಂದು ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ಕೊಟ್ಟರು ಎಂಬ ಬಗ್ಗೆ ನನಗೆ ಖಚಿತವಾಗಿ ಹೇಳಲು ಬರುವುದಿಲ್ಲ. ಪ್ರತಿವಾದಿಯು ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ಕೊಟ್ಟಾಗ ನೀವೇನಾದರೂ ಸ್ಥಳದಲ್ಲಿ ಹಾಜರಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ನಾನು ಸಹ ಹಾಜರಿದ್ದೆ

ಎಂದು ನುಡಿಯುತ್ತಾರೆ. ಈ ರೀತಿ ಪ್ರತಿವಾದಿ ವಾದಿಗೆ ತೊಂದರೆ ಕೊಟ್ಟಾಗ ಸಂಜೆ 5 ಗಂಟೆಯಾಗಿತ್ತು. 5 ಗಂಟೆಯಿಂದ 6.30 ರವರೆಗೂ ಗಲಾಟೆ ನಡೆಯಿತು ಆನಂತರ ನಾನು ಅಲ್ಲಿಂದ ಹೊರಟು ಹೋದೆ. ಆ ಸಮಯದಲ್ಲಿ ಅಲ್ಲಿ ಬೇರೆಯವರು ಯಾರು ಯಾರು ಇದ್ದರು ಎನ್ನುವುದು ನನಗೆ ಈಗ ಮರೆತು ಹೋಗಿರುತ್ತದೆ. ಆ ಸಮಯದಲ್ಲಿ ಇನ್ನು 10 ಜನರು ಸ್ಥಳದಲ್ಲಿ ಇದ್ದರು. ಆದರೆ ನನಗೆ ಅವರ ಹೆಸರುಗಳು ಹೇಳಲು ಆಗುವುದಿಲ್ಲ. ಆ ದಿನ ಜೆಸಿಬಿಯನ್ನು ಚಲಾಯಿಸುತ್ತಿದ್ದ ವ್ಯಕ್ತಿಯ ಹೆಸರು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಅಕ್ಕಪಕ್ಕ ಪ್ರತಿವಾದಿ ಅಥವಾ ಅವರ ಕುಟುಂಬಕ್ಕೆ ಸಂಬಂಧಿಸಿದ ಜಮೀನುಗಳು ಇವೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಪ್ರತಿವಾದಿಯ ಜಮೀನುಗಳ ಚಕ್ಕುಬಂದಿ ನನಗೆ ಗೊತ್ತಿಲ್ಲ.

4. ನಾನು ಪ್ರತಿವಾದಿಯ ವಿರುದ್ದ ಹೂಡಿದ ದಾವೆಯಲ್ಲಿ ಆ ದಾವೆಯ ಸ್ವತ್ತಿನ ಪೂರ್ವಕ್ಕೆ ಶಿವಣ್ಣನವರ ಜಮೀನು ಬರುತ್ತದೆ ಎಂದು ತೋರಿಸಿರುತ್ತೇನೆ ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ಬರುವ ಪ್ರತಿವಾದಿಯ ಜಮೀನನ್ನು ಕಬಳಿಸುವ ದುರುದ್ದೇಶದಿಂದ ನಾನು ಮತ್ತು ವಾದಿ ಸುಳ್ಳು ಚಕ್ಕುಬಂದಿಯನ್ನು ತೋರಿಸಿ ಪ್ರತಿವಾದಿಯ ವಿರುದ್ದ ಸುಳ್ಳು ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯು ಯಾವತ್ತು  ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ವಾದಿಗೆ ತೊಂದರೆ ಕೊಡದೇ ಇರುವ ಕಾರಣ ನನಗೆ ತೊಂದರೆ ಕೊಟ್ಟ ದಿನಾಂಕ ಮತ್ತು ಅಲ್ಲಿ ನೇರದಿದ್ದ ಬೇರೆ ಜನರ ಹೆಸರುಗಳನ್ನು ಹೇಳಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ವಾದಿಯು ದಾವಾ ಷೆಡ್ಯೂಲ್ ನಲ್ಲಿ ನಮೂದಿಸಿದ ಜಮೀನಿನಲ್ಲಿ ಯಾವತ್ತು ಸ್ವಾಧೀನಾನುಭವದಲ್ಲಿ ಇಲ್ಲದೇ ಇರುವ ಕಾರಣ ಪ್ರತಿವಾದಿಯು ಆತನಿಗೆ ತೊಂದರೆ ಕೊಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ.

OS 373/2018

PW-2

ಮರುವಿಚಾರಣೆ : ಇರುವುದಿಲ್ಲ

ಓ ಹೇ ಕೇ ಸರಿ ಇದೆ

**(ರಾಧಾ ಎಸ್ )**

ಅ/ಅ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,

ಕನಕಪುರ .